**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 2556/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.04**

**ದಿನಾಂಕಃ 14.08.2025** **ಸಿಡಬ್ಲ್ಯೂ.07**

| | |
|---|---|
| ಹೆಸರು | ಹನುಮಂತಪ್ಪ |
| ತಂದೆ ಹೆಸರು | ರಾಜಪ್ಪ |
| ವಯಸ್ಸು | 25 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಬೆಳ್ಳೂಡಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ನನ್ನ ತಮ್ಮ. ಮೃತ ರಾಜಪ್ಪ ನನ್ನ ತಂದೆ. 2 ನೇ ಆರೋಪಿ ಪರಿಚಯವಿದೆ.

ದಿಃ 19.12.2021 ರಂದು ನಾನು ನನ್ನ ತಂದೆ, 2 ನೇ ಆರೋಪಿ ಮತ್ತು ಚಾಸಾ.1 ಟ್ರಾಕ್ಟರ್ ನಲ್ಲಿ ಬೆಳ್ಳೂಡಿಯಲ್ಲಿರುವ ನಮ್ಮ ಜಮೀನಿಗೆ ಹೋಗಿ ಮರಳಿ ಬರುತ್ತಿರುವಾಗ ರಾತ್ರಿ 9.00 ಗಂಟೆ ಸುಮಾರು ರೋಷಿನಿ ಪ್ಯಾಲೇಸ್ ಡಾಬಾ ಹತ್ತಿರ ನಮ್ಮ ಹಿಂದುಗಡೆಯಿಂದ ಒಂದು ಕಾರು ಬಂದು ನಮ್ಮ ಟ್ರಾಕ್ಟರ್ ನ ಹಿಂಭಾಗಕ್ಕೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತ ಸಂಬವಿಸಿರುತ್ತದೆ. ಸದರಿ ಅಪಘಾತದಿಂದಾಗಿ ನಾನು ನನ್ನ ತಂದೆ ಮತ್ತು ಚಾಸಾ.1 ಕೆಳಗೆ ಬಿದ್ದೆವು. ನನ್ನ ಬಲಗಾಲಿಗೆ ಏಟು ಬಿದ್ದು ಕಾಲು ರಸ್ತೆಗೆ ತೆರಚಿಕೊಂಡಿತ್ತು. ನನ್ನ ತಂದೆಗೆ ತಲೆಗೆ ಏಟು ಬಿದ್ದಿತ್ತು. 2 ನೇ ಆರೋಪಿ ಮತ್ತು ಚಾಸಾ.1 ರವರಿಗೆ ಯಾವುದೇ ಪೆಟ್ಟು ಆಗಿರಲಿಲ್ಲ. ನಮ್ಮನ್ನು ಅಲ್ಲಿದ್ದ ಜನರು ಹರಿಹರ ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು. ಕಾರಿನ ಚಾಲಕನಿಗೆ ಯಾವುದೇ ಪೆಟ್ಟು ಆಗಿರಲಿಲ್ಲ. ನನ್ನ ತಂದೆಗೆ ಮಂಗಳೂರಿನಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಿದೆವು. ತಲೆಗೆ ಏಟು ಬಿದ್ದಿದ್ದರಿಂದ ದಿಃ 22.12.2021 ರಂದು ನನ್ನ ತಂದೆ ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ. ನಮ್ಮ ಹಿಂದೆ ಬರುತ್ತಿದ್ದ ಕಾರು ತುಂಬಾ ವೇಗವಾಗಿ ಬರುತ್ತಿತ್ತು. ಸದರಿ ಅಪಘಾತ ಕಾರು ಚಾಲಕನ ತಪ್ಪಿನಿಂದ ಆಗಿರುತ್ತದೆ. ಈ ಎಲ್ಲಾ ವಿಚಾರವಾಗಿ ನನ್ನ ತಂದೆ ಶವಪಂಚನಾಮೆ ಕಾಲಕ್ಕೆ ನಾನು ಹೇಳಿಕೆ ನೀಡಿರುತ್ತೇನೆ.

ಅಪಘಾತವಾದ ಒಂದೆರಡು ದಿನಗಳ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಅಲ್ಲಿ ಕಾರು ಚಾಲಕರು ಇದ್ದರು. ಕಾರು ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ಗೈರು ಹಾಜರಿದ್ದು ಆರೋಪಿ ಪರ ವಕೀಲರು ಅವರ ಗುರುತಿಸುವಿಕೆ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕಾರು ಚಾಲಕನ ಹೆಸರು ಮಂಜಾನಾಯ್ಕ. ಕಾರು ಚಾಲಕನನ್ನು

ಗುರುತಿಸಿದ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಎಸ್ ವಕೀಲರಿಂದಃ**

ಘಟನಾ ಸಂದರ್ಭದಲ್ಲಿ ನಾನು ಟ್ರಾಕ್ಟರ್ ಇಂಜಿನಲ್ಲಿ ಇದ್ದೆನು. ನಾವು ಚಾಲಕನನ್ನು ಸೇರಿಸಿಕೊಂಡು 4 ಜನ ಕುಳಿತಿದ್ದೆವು. ಟ್ರಾಕ್ಟರ್ ಟ್ರೈಲರ್ ನಲ್ಲಿದ್ದ ಹುಲ್ಲು ಟ್ರೈಲರ್ ನಿಂದ ಸುಮಾರು 4 ಅಡಿ ಎತ್ತರ ಇತ್ತು. ಹೀಗಿರುವಾಗ ಇಂಜೆನ್ ಮೇಲೆ ಕುಳಿತರೆ ಹಿಂದುಗಡೆ ಬರುವ ವಾಹನಗಳು ಕಾಣುವುದಿಲ್ಲ ಎಂದರೆ ಸರಿ. ಆದ್ದರಿಂದ ಕಾರು ಯಾವ ರೀತಿ ಬರುತ್ತಿತ್ತು ಎಂದು ನಾನು ನೋಡಿಲ್ಲ ಎಂದರೆ ಸರಿ. ಟ್ರಾಕ್ಟರ್ ಚಾಲಕ ಹಾಗೂ ಅವರ ತಂದೆಯ ಮೇಲೆ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ಚಾಲಕ ಮತ್ತು ಅವರ ತಂದೆಯನ್ನು ಯಾವ ಕಾರಣಕ್ಕಾಗಿ ಆರೋಪಿತರನ್ನಾಗಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಿಃ 22.12.2021 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಅಂದರೆ ಅಪಘಾತವಾದ ಮಾರನೇ ದಿನ ನೀಡಿರುತ್ತೇನೆ. 1 ನೇ ಆರೋಪಿ ಕಾರು ಚಾಲಕನನ್ನು ನಾನು ದಿಃ 22.12.2021 ರಂದು ನೋಡಿರುತ್ತೇನೆ. ನನ್ನ ತಂದೆ ತೀರಿಕೊಂಡಿದ್ದರಿಂದ ನಾನು ಪರಿಹಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಪರಿಹಾರ ಧನಕ್ಕೆ ಆದೇಶವಾಗಿದೆ ಎಂದರೆ ಸರಿ. ಟ್ರಾಕ್ಟರ್ ಚಾಲಕ ಏಕಾಏಕಿ ಬ್ರೇಕ್ ಹಾಕಿದ್ದರಿಂದ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ತಮ್ಮ ನಿರ್ಲಕ್ಷ್ಯತನದಿಂದ ಬಿದ್ದು ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ಧನ ಸಿಗಬೇಕೆಂಬ ಉದ್ದೇಶದಿಂದ 1 ನೇ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಆರೋಪಿ ಮತ್ತು ನಾವು ಒಂದೇ ಊರಿನವರು ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ